# ತನುವ ನೀರೊಳಗದ್ದಿ ಫಲವೇನು

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 62.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 265.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 258.
4. **Note:** The wordings as per Ref. 1 are given without highlights. The wordings in Ref. 2 are similar to Ref.1 except few differences. These differences are not considered here.
5. **Note:** The wordings given in yellow highlights are as per Ref. 3. The singer has followed these lyrics.

ರಾಗ: ಮಧ್ಯಮಾವತಿ ತಾಳ: ಅಟ

| | |
|---|---|
| ತನುವ ನೀರೊಳಗದ್ದಿ ಫಲವೇನು | ತನುವ ನೀರೊಳಗದ್ದಿ ಫಲವೇನು |
| ಮನದಲ್ಲಿ ದೃಢ ಭಕ್ತಿ ಇಲ್ಲದ ಮನುಜನು \|\| ಪ \|\| | ಮನದಲ್ಲಿ ದೃಢ ಭಕುತಿ ಇಲ್ಲದ ಮನುಜನು |
| | |
| ದಾನ ಧರ್ಮಗಳನ್ನು ಮಾಡುವುದೆ ಸ್ನಾನ | ದಾನ ಧರ್ಮಗಳನು ಮಾಡುವುದೆ ಸ್ನಾನ |
| ಜ್ಞಾನ ತತ್ವಂಗಳ ತಿಳಿವುದೆ ಸ್ನಾನ | ಜ್ಞಾನ ತತ್ವಂಗಳ ತಿಳಿಯುವುದೆ ಸ್ನಾನ |
| ಹೀನ ಪಾಪಂಗಳ ಬಿಡುವುದೆ ಸ್ನಾನ | ಹೀನ ಪಾಪಂಗಳ ಬಿಡುವುದೆ ಸ್ನಾನ |
| ಧ್ಯಾನದಿ ಮಾಧವನ ನೋಡುವುದೆ ಸ್ನಾನ \|\| ೧ \|\| | ಧ್ಯಾನದಿ ಮಾಧವನ ನಂಬುವುದೆ ಸ್ನಾನ |
| | |
| ಗುರುಗಳ ಪಾದ ದರ್ಶನವೆ ಸ್ನಾನ | ಗುರುಗಳ ಶ್ರೀಪಾದ ತೀರ್ಥವೆ ಸ್ನಾನ |
| ಹಿರಿಯರ ದರ್ಶನ ಮಾಡುವುದೆ ಸ್ನಾನ | ಹಿರಿಯರ ದರುಶನ ಮಾಡುವುದೆ ಸ್ನಾನ |
| ಕರೆದು ಅನ್ನವನಿಕ್ಕುವುದೊಂದು ಸ್ನಾನ | ಕರೆದು ಅನ್ನವನು ಇಕ್ಕುವುದೊಂದು ಸ್ನಾನ |
| ನರಹರಿ ಚರಣ ನಂಬುವುದೆ ಸ್ನಾನ \|\| ೨ \|\| | ಸಿರಿ ಹರಿ ಚರಣ ನಂಬುವುದೊಂದು ಸ್ನಾನ |
| | |
| ದುಷ್ಟರ ಸಂಗವ ಬಿಡುವುದೆ ಸ್ನಾನ | ದುಷ್ಟರ ಸಂಗವ ಬಿಡುವುದೊಂದು ಸ್ನಾನ |
| ಶಿಷ್ಟರ ಸಹವಾಸ ಮಾಡುವುದೆ ಸ್ನಾನ | ಕಷ್ಟ ಪಾಪಂಗಳನು ಹರಿವುದೆ ಸ್ನಾನ |
| ಸೃಷ್ಟಿಯೊಳಗೆ ಸಿರಿ ಪುರಂದರ ವಿಠಲನ | ಸೃಷ್ಟಿಯೊಳಗೆ ಸಿರಿ ಪುರಂದರ ವಿಠಲನ |
| ಮುಟ್ಟಿ ಭಜಿಸಿದರೆ ವಿರಜಾ ಸ್ನಾನ \|\| ೩ \|\| | ಮುಟ್ಟಿ ಭಜಿಸಿ ಪುಣ್ಯ ಪಡೆವುದೆ ಸ್ನಾನ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಭಕ್ತಿ ಇಲ್ಲದ ಮಾನವನ ಸ್ನಾನಾದಿ ಕರ್ಮಗಳಿಂದ ಏನು ಫಲ ಬರುವುದೆಂದು ದಾಸರು ಈ ಹಾಡಿನಲ್ಲಿ ಹೇಳಿದ್ದಾರೆ.

**ವಿರಜ** = ಕಾಮ ಕ್ರೋಧಾದಿ ವಿಕಾರಗಳಿಗೆ ಸಿಲುಕದ, ಶುದ್ಧ ಚಿತ್ತದ, ಸದಾಕಾಲ ದೋಷಗಳಿಂದ,
ದೂರಾಗಿರುವವನು, ನಿರ್ವಿಕಾರವಾದ, ವಿಷ್ಣು, ವೈಕುಂಠದ ನದಿ

**ವಿರಜಾ ನದಿ =** ವೈಕುಂಠ ಮಾರ್ಗದಲ್ಲಿ ಇರುವ ನದಿ, ಜೀವನು ಮೋಕ್ಷಕ್ಕೆ ಹೋಗುವಾಗ ವಿರಜಾ ನದಿಯಲ್ಲಿ
ಸ್ನಾನಮಾಡಿ ಲಿಂಗ ಶರೀರವನ್ನು ಕಳಚಿಕೊಳ್ಳುತ್ತಾನೆ.

**ತನು** = ದೇಹ, ಶರೀರ

**Classification:** Keerthane
**Ankita:** Siri Purandara Vittala
**Location:** NA
**Category:** Jeevana Sambodhane, Loka Neeti,
**Sub-Category:** deha, niru, nara, dana, dharma, snana, papa, madhava, anna, narasimha, Krishna, viraja, nadi
**Pravachana:** NA
**Explanation:** NA